# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ-161 ಹೊಸಕೆರೆಹಳ್ಳಿ, ಬೆಂಗಳೂರು


ಸಂ: ಸ.ಅ/ವಾ-161/ಪಿ.ಆರ್/01/2021-22 ದಿನಾಂಕ : 04-09-2021

## ವಾರ್ಡ್ ಸಮಿತಿಯ ಸಭೆಯ ನಡವಳಿಗಳು

ವಿಷಯ:- ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ :ಬಿ12(58)ಪಿಆರ್/35/2020-21 ದಿನಾಕ :21-09-2020 ರವರ ಆದೇಶದಂತೆ ದಿನಾಂಕ :04-09-2021 ರಂದು ವಾರ್ಡ್ ಸಂಖ್ಯೆ-161 ಹೊಸಕೆರೆಹಳ್ಳಿ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮತಿ ಸಭೆಯ ನಡವಳಿಗಳು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಾರ್ಡ್ ಕಮಿಟಿ ಸಭೆ ನಿಗಧಿಪಡಿಸಿ ದಿನಾಂಕ :04-09-2021 ರಂದು ವಾರ್ಡ್ ಕಛೇರಿಯಲ್ಲಿ ಬೆಳಿಗ್ಗೆ 10.30 ಗಂಟೆಗೆ ಶ್ರೀ ಧರಣೇಂದ್ರಕುಮಾರ್ ನೋಡಲ್ ಅಧಿಕಾರಿಗಳು ರವರ ಅಧ್ಯಕ್ಷತೆಯಲ್ಲಿ ಹಾಗೂ ಶ್ರೀ ವೆಂಕಟಮಲವಪ್ಪ.ಕೆ ಸದಸ್ಯ ಕಾರ್ಯದರ್ಶಿ ರವರ ಕಾರ್ಯಾಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು.

ಸಭೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರು ಹಾಜರಿರುತ್ತಾರೆ.

ಹಿಂದಿನ ವಾರ್ಡ್ ಸಭೆಯ ನಡವಳಿಗಳನ್ನು ಚರ್ಚಿಸಲಾಗಿರುತ್ತದೆ.

1) ಟಿ.ಬಡಾವಣೆ 19ನೇ ಅಡ್ಡರಸ್ತೆಯಲ್ಲಿ ಆರ್.ಪ್ಲಾಟ್ ದುರಸ್ಥಿ ಬಗ್ಗೆ (ಪಾನಲ್ ಬೋರ್ಡ್) ಚರ್ಚಿಸಲಾಗಿರುತ್ತದೆ.

2) ಬೆಸ್ಕಾಂ ಇಲಾಖೆಯಿಂದ ಕೇಬಲ್ ಅಳವಡಿಸಲು 1.50 ಮೀಟರ್ + 1.50 ಮೀಟರ್‌ನಷ್ಟು ಪಿಟ್‌ಗಳನ್ನು ಅಗೆಯುತ್ತಿದ್ದು, ಕೆಲವೊಂದು ಕಡೆಗಳಲ್ಲಿ Linear Cuttings done Roads ಮತ್ತು Horizontal Cuttings ಗಳನ್ನು ಮಾಡಲಾಗಿದ್ದು, ನಿಗಧಿತ ಆಳದಲ್ಲಿ ಕೇಬಲ್ ಅಳವಡಿಸಲು ತಿಳಿಸಲಾಯಿತು ಹಾಗೂ ಕಾಮಗಾರಿಯನ್ನು ಪೂರ್ಣಗೊಳಿಸಲು 10 ದಿನಗಳ ಕಾಲಾವಕಾಶ ನೀಡಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸಭೆಯಲ್ಲಿದ್ದ ಬೆಸ್ಕಾಂ ಅಧಿಕಾರಿಗಳಿಗೆ ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.

3) ಹೊಸಕೆರೆಹಳ್ಳಿ ರೆಫರಲ್ ಆಸ್ಪತ್ರೆಯಲ್ಲಿ ಆಮ್ಲಜನಕ ಸೋರಿಕೆ ಬಗ್ಗೆ ಸಭೆ ಹಾಜರಿದ್ದ ವೈಧ್ಯಾಧಿಕಾರಿಗಳಿಗೆ ಚರ್ಚಿಸಿ ಕೂಡಲೇ ಸರಿಪಡಿಸುವಂತೆ ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.

4) ಹೊಸಕೆರೆಹಳ್ಳಿ ಎ.ಕೆ.ಕಾಲೋನಿಯಲ್ಲಿ ಹೊಸದಾಗಿ ಬೀದಿ ದೀಪ ಅಳವಡಿಸಲು ಸಭೆಯಲ್ಲಿ ಸೂಚಿಸಲಾಗಿರುತ್ತದೆ.

5) ಹೊಸಕೆರೆಹಳ್ಳಿ ರಸ್ತೆ ಬದಿಯಲ್ಲಿ ನೆಡಲಾಗಿರುವ ಸಸಿಗಳಿಗೆ ಟೀಗಾರ್ಡ್ ಅಳವಡಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ.

ಮುಂದುವರೆದಂತೆ ಉಲ್ಲೇಖ ಸಂಖ್ಯೆ :ಮು.ಆ/ಪಿಆರ್/1113/2021-22 ದಿನಾಂಕ :26-07-2021 ರಲ್ಲಿ ಮಾನ್ಯ ಮುಖ್ಯ ಆಯುಕ್ತರು 2021-22 ನೇ ಸಾಲಿನ ಆಯುವ್ಯಯದಲ್ಲಿ ನಿರ್ವಹಣೆ ಮತ್ತು ಅಭಿವೃದ್ಧಿ ಹೊಸ ಕಾಮಗಾರಿಗೆ ಪ್ರತಿ ವಾರ್ಡ್‌ಗೆ ಒಟ್ಟು ರೂ.60.00 ಲಕ್ಷಗಳನ್ನು ಮೀಸಲಿರಿಸಲಾಗಿದ್ದು, ಅದರಂತೆ ಕ್ರಿಯಾ ಯೋಜನೆಯಲ್ಲಿ Line Estimate ಮಾಡಿ ವಾರ್ಡ್ ಸಮಿತಿ ಸಭೆಯಲ್ಲಿ ಪ್ರಸ್ತಾವನೆ ಸಲ್ಲಿಸಲು ಸೂಚಿಸಿರುವ ಮೇರೆಗೆ ಈ ಕೆಳಕಂಡ ಕಾಮಗಾರಿಗಳಿಗೆ ಪ್ರಸ್ತಾವನೆಯನ್ನು ವಾರ್ಡ್ ಸಮಿತಿ ಸಭೆಯಲ್ಲಿ ಸಲ್ಲಿಸಲಾಯಿತು.

| ಕ್ರಮ ಸಂಖ್ಯೆ | ಕಾಮಗಾರಿ ಹೆಸರು | ಅಂದಾಜು ಮೊತ್ತ (ಲಕ್ಷಗಳಲ್ಲಿ) |
|---|---|---|
| 1 | ರಸ್ತೆ ಮತ್ತು ದುರಸ್ಥಿ ನಿರ್ವಹಣೆ ಕಾಮಗಾರಿ. | 20.00 |
| 2 | ಕೊಳವೆ ಬಾವಿಗಳ ನಿರ್ವಹಣೆ ಮತ್ತು ದುರಸ್ಥಿ ಕಾಮಗಾರಿ. | 20.00 |
| 3 | ರಸ್ತೆ ಗುಂಡಿ ಮುಚ್ಚುವ ಕಾಮಗಾರಿ. | 20.00 |

ಮಾನ್ಯ ಆಯುಕ್ತರವರ ಸೂಚನೆಯಂತೆ ಪ್ರತಿ ಒಂದನೇ ಹಾಗೂ ಮೂರನೇ ಶನಿವಾರದಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ಹಾಜರಿರಲು ಕೋರುತ್ತಾ ಮತ್ತು ಮುಂದಿನ ಸಭೆಯಲ್ಲಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಶನ್ ರವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಹ್ವಾನಿಸಲು ಸಂಚಾಲಕರಿಗೆ ಸೂಚಿಸಿ ಸಭೆಯಲ್ಲಿ ಯಾವುದೇ ಪ್ರಸ್ತಾವನೆ ಮಾಡದಿದ್ದ ಕಾರಣ ನೋಡಲ್ ಅಧಿಕಾರಿ/ಅಧ್ಯಕ್ಷರ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ಸಂಚಾಲಕರು

ವಾರ್ಡ್ 161 ರ ನೋಡಲ್ ಅಧಿಕಾರಿ.